

ಸಂಪಾದಕೀಯ

# ಹೊಸ ಜೀವನದ ಹೋರಾಟ

ಎಲ್ಲರೂ ಜೀವನದಲ್ಲಿ ಒಂದಲ್ಲ ಒಂದು ವಸ್ತುವನ್ನು ಕಂಡುಕೊಳ್ಳಲೇಬೇಕು; ಅದಕ್ಕಾಗಿ ಹೋರಾಟ ನಿರಂತರ ನಡೆಯುತ್ತಿರುತ್ತದೆ. ಈ ಹೋರಾಟ ಇಂದು-ನಿನ್ನೆಯದಲ್ಲ; ಮಾನವನ ಬುದ್ಧಿ ಬೆಳೆದ ದಿನದಂದಲೂ ನಡೆಯುತ್ತ ಬಂದಿದೆ. ಪ್ರಾಣಿಪಕ್ಷಿಗಳಲ್ಲೂ, ಕ್ರಿಮಿಕೀಟಾದಿಗಳಲ್ಲೂ ಹೋರಾಟ ಎನ್ನುವುದು ಇದ್ದೇ ಇದೆ – ಆದರೆ ಅಲ್ಲಿ ಬುದ್ಧಿಯ ವಿಕಾಸವಿಲ್ಲ; ಅರಿವಿನ ಪ್ರಕ್ರಿಯೆಯಿಲ್ಲ. ಆದ್ದರಿಂದ ಮಾನವನ ಜೀವನ ಹೆಚ್ಚು ಸಾಧ್ಯತೆಗಳನ್ನು ಒಳಗೊಂಡಿತು; ಅವನ ಹೋರಾಟದ, ಅನ್ವೇಷಣೆಯ ಹಾದಿಯಲ್ಲಿ ಅವನು ಹಲವಾರು ಹೊಸತುಗಳನ್ನು ಕಾಣುವಂತಾಯಿತು.

## ಮೂರು ಬಗೆಯ ಜನರು

ಜೀವನದ ಹೋರಾಟದಲ್ಲಿ ಮಾನವನು ಹಲವು ಬಗೆಯ ಹೊಸ ಅನುಭವಗಳನ್ನು ಪಡೆಯುತ್ತಾನೆ; ಅನೇಕ ಬಾರಿ ದಾರಿಕಾಣದೆ ಕಂಗೆಡುತ್ತಾನೆ, ಹತಾಶೆಗೆ ಒಳಗಾಗುತ್ತಾನೆ. ಆದರೆ, ಒಂದೊಂದು ವೇಳೆ ಅಚ್ಚರಿ ಮೂಡಿಸುವ, ಹಿಂದೆಂದೂ ಕಂಡಿರದ ಸತ್ಯಗಳು ದೃಗ್ಗೋಚರವಾದಾಗ ಅವನು ಬೆಚ್ಚಿಬೀಳುತ್ತಾನೆ, ಆಶ್ಚರ್ಯ-ಬೆರಗುಗಳಿಂದ ಮೈಮರೆತು ಹೋಗುತ್ತಾನೆ. ಹೀಗೆ ಇತಿಹಾಸದ ದೀರ್ಘ ಪ್ರಯಾಣದಲ್ಲಿ ಬೆಳೆದು ಬಂದ ಮಾನವ ಕುಲದಲ್ಲಿ ಅನೇಕ ಬಗೆಯ ಅನುಭವಗಳಾದವು; ಅದಕ್ಕನುಗುಣವಾಗಿ ಅವನ ಜೀವನವೂ ಬದಲಾಯಿಸಿತು. ಮಾನವನು ಜೀವನವನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ತನ್ನ ಭಿನ್ನ ಭಿನ್ನ ಸ್ಥಾನಮಾನಗಳ ಕಾರಣದಿಂದಾಗಿ ಮೂರು ಬಗೆಯ ಪ್ರವೃತ್ತಿಯನ್ನು ವ್ಯಕ್ತಪಡಿಸುತ್ತಾನೆ. ೧) ಜೀವನದ ಅಗತ್ಯವಸ್ತುಗಳಿಗಾಗಿ ಹೋರಾಟ ೨) ಅಗತ್ಯ ವಸ್ತುಗಳ ಪೂರೈಕೆ ಬೇಕಾದಷ್ಟು ಆದಾಗ, ಸುಖಭೋಗಗಳಲ್ಲೇ ತೃಪ್ತನಾಗಿ ಮೈಮರೆತಿರುವುದು ೩) ಜೀವನದ ಅಗತ್ಯ ವಸ್ತುಗಳೆಲ್ಲವೂ ದೊರಕಿರುವಾಗ, ಅದರಾಚೆಗೂ ಹೋಗಿ ಹೊಸತನ್ನು ಅರಸುವ ಪ್ರವೃತ್ತಿ. ಈ ಮೂರೂ ಬಗೆಯ ಪ್ರವೃತ್ತಿ ಸಮಾಜವನ್ನು ಯಾವ ದಿಕ್ಕಿಗೆ ಕೊಂಡೊಯ್ಯುವುದು ಎಂಬುದನ್ನು ಸ್ವಲ್ಪ ವಿಶದವಾಗಿ ಪರಿಶೀಲಿಸಬೇಕು.

## ಅಗತ್ಯವಸ್ತುಗಳಿಗಾಗಿ ಹೋರಾಟ

ಮಾನವನು ಆದಿವಾಸಿಯಾಗಿದ್ದ ಕಾಲದಿಂದಲೂ, ಬೇಟೆಯಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ಯುಗ-ಯುಗಗಳಿಂದಲೂ ತನ್ನ ಹಸಿವನ್ನು ಅಡಗಿಸಿಕೊಳ್ಳುವುದೊಂದೇ ಜೀವನದ ಗುರಿಯಾಗಿತ್ತು. ಕಾಡಿನಲ್ಲಿ ಮೃಗಗಳ ಬೇಟೆ, ಹೇರಳವಾಗಿ ಲಭ್ಯವಿದ್ದ ನದಿ, ಕೊಳ, ಝರಿಗಳ ನೀರು, ವಿಶ್ರಾಂತಿಗಾಗಿ ಗುಹೆ, ಗುಡಿಸಲು, ಮರಗಳ ಆಶ್ರಯ – ಈ ಬಗೆಯ ಜೀವನ ಮಾನವನಿಗೆ ಸಹಜವಾಗಿತ್ತು. ಸಂತತಿ ಬೆಳೆದಾಗ ಬದುಕು ದುಸ್ತರವಾಯಿತು. ವಲಸೆ, ಕೃಷಿ, ಹೊಸ ಬಗೆಯ ಜೀವನಕ್ರಮ ಅನಿವಾರ್ಯವಾಯಿತು. ಮಾನವನ ಬುದ್ಧಿ ಕೂಡ ವಿಕಾಸಗೊಂಡಿತು. ವ್ಯವಸ್ಥಿತವಾಗಿ ಪ್ರಕೃತಿಯ ಸಾಮಗ್ರಿಗಳನ್ನು ಬಳಸಿಕೊಂಡು, ಜೀವನಕ್ಕೆ ಅಗತ್ಯವಾದ ಆಹಾರ, ವಸತಿ, ಬಟ್ಟೆಬರೆ, ಉಪಕರಣಗಳು — ಇಂತಹ ಅಭಿವೃದ್ಧಿಗಳಾದವು. ಕ್ರಮೇಣ ಮಾನವನು ನೆಮ್ಮದಿಯ ಬದುಕನ್ನು ಕಂಡುಕೊಳ್ಳಲು ಕಲಿತ. ಆದರೆ ಮಾನವನ ಸಂತತಿ ಹೆಚ್ಚಿದಂತೆಲ್ಲ ಹೊಸ ಸಮಸ್ಯೆಗಳು ಎದುರಾದವು. ಪೈಪೋಟಿ, ಜಗಳ, ಅಂತಃಕಲಹ, ಯುದ್ಧ, ವಾಣಿಜ್ಯ-ವ್ಯವಹಾರ, ಮೋಸ-ವಂಚನೆ, ಇವೂ ಕಂಡುಬಂದವು. ಆದರೂ ಜೀವನದ ಅನ್ವೇಷಣೆ ನಿಲ್ಲಲಿಲ್ಲ. ಶಾಂತಿ, ನೆಮ್ಮದಿ ಬಯಸಿದ ಮಂದಿ ನೀತಿ, ನಿಯಮ, ವ್ಯವಸ್ಥೆ ಇವನ್ನು ಮಾಡಿಕೊಂಡರು. ಒಳಿತು, ಕೆಡಕು, ನೀತಿ-ಅನೀತಿ, ಧರ್ಮ-ಅಧರ್ಮ, ಆಡಳಿತ ವ್ಯವಸ್ಥೆ ಹಾಗೂ ಅದನ್ನು ಮೀರಿ ಅಪರಾಧವೆಸಗುವ ಪ್ರವೃತ್ತಿ-ಎಲ್ಲವೂ ಸಮಾಜದ ಅಂಗವಾಯಿತು. ಹೀಗೆ ನಾಗರಿಕತೆಗಳು ಬೆಳೆದವು; ದೊಡ್ಡ ದೊಡ್ಡ ದೇಶ, ಆಡಳಿತ, ಆಧುನಿಕತೆ –ಇವೆಲ್ಲ ರೂಪುಗೊಂಡವು. ಆದರೂ ಮಾನವನು ತನ್ನ ಅಗತ್ಯದ ವಸ್ತುಗಳನ್ನು ಸಮರ್ಪಕವಾಗಿ ಪೂರೈಸಿಕೊಳ್ಳುವ ಸಮಸ್ಯೆ ಇನ್ನೂ ಪೂರ್ಣವಾಗಿ ಬಗೆಹರಿದಿಲ್ಲ. ಎಷ್ಟೋ ದೇಶಗಳಲ್ಲಿ ಬಡಜನರು ಇನ್ನೂ ಅನ್ನ, ಬಟ್ಟೆ, ವಸತಿಗಾಗಿ ನಿರಂತರ ಹೋರಾಡುತ್ತಿದ್ದಾರೆ. ಎಲ್ಲ ಸರಿಯಾಗಿದೆ ಎಂದು ಕೊಂಡಿರುವ ಸಮಾಜದಲ್ಲೇ ಹೊಸ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿವೆ. ಅಂತಿಮವಾಗಿ ಎಲ್ಲವಕ್ಕೂ ಹಣವೇ ಮೂಲ, ಅದಕ್ಕಾಗಿ 'ಬಹುಕೃತ ವೇಷ'ವನ್ನು ಧರಿಸುವ ಪ್ರವೃತ್ತಿಯನ್ನು ಬಗೆ ಬಗೆಯಲ್ಲಿ ನೋಡುತ್ತಿದ್ದೇವೆ.

### ಪ್ರಾಪಂಚಿಕ ವಸ್ತುಗಳಲ್ಲೇ ಮತ್ತರಾದವರು

ಜೀವನದ ಹೋರಾಟದಲ್ಲಿ ಒಂದು ಅವಸ್ಥೆ ಬರುತ್ತದೆ. ಅಗತ್ಯ ವಸ್ತುಗಳನ್ನು ಪೂರೈಸಿಕೊಂಡಾಗ, ಅಲ್ಲಿಗೇ ತೃಪ್ತರಾಗದೆ, ನಾಳೆಗಾಗಿ ಇನ್ನಷ್ಟು 'ಕೂಡಿಹಾಕುವ' ಪ್ರವೃತ್ತಿ. ಇದನ್ನು ಮಾನವನ ಮುಂದಾಲೋಚನೆಯೆನ್ನಬೇಕೇ, ಅಥವಾ ಲೋಭಪ್ರವೃತ್ತಿಯೆನ್ನಬೇಕೆ? ಆಹಾರದ ಸಮಸ್ಯೆ ಕಾಡಿದಾಗ, ಅಗತ್ಯ ವಸ್ತುಗಳ ಲಭ್ಯತೆ ಕಡಿಮೆಯಾದಾಗ, 'ಮುಂದೊಮ್ಮೆ ಬೇಕಾಗಬಹುದು' ಎಂದು ವಸ್ತುಗಳನ್ನು ಶೇಖರಿಸಿಡುವುದು ಸ್ವಾಭಾವಿಕ. ಆದರೆ ಕೂಡಿಡುವ ಪ್ರವೃತ್ತಿ ಇಲ್ಲಿಗೇ ನಿಲ್ಲುವುದಿಲ್ಲ. ಅಧಿಕಗಳಿಸಿದಷ್ಟೂ ಅಧಿಕ ಸುಖಭೋಗ, ಸಂಪತ್ತು ಹೆಚ್ಚಿದಷ್ಟೂ ಅನುಕೂಲತೆ ಹೆಚ್ಚು; ಇದರಿಂದ ತಾನು ಇತರರಿಗಿಂತ ಉತ್ತಮ ಜೀವನ ನಡೆಸಬಲ್ಲೆ ಎಂಬ ದುರಾಸೆಯ ಪ್ರವೃತ್ತಿ ಮೂಡಿಬರುತ್ತದೆ. ಸ್ವಾರ್ಥಬುದ್ಧಿ ಹೆಚ್ಚಿದಷ್ಟೂ ಸಮಾಜದಲ್ಲಿ ಸಮಸ್ಯೆ ಹೆಚ್ಚುವುದು. 'ತಮಗಾರಿಗೂ ಇಲ್ಲ; ಅವನೊಬ್ಬನೇ ಅನುಭವಿಸುತ್ತಾನೆ' ಎಂದು ಉಳಿದವರೆಲ್ಲ ಗೊಣಗುತ್ತಾರೆ.'ಅವರಾರಿಗೂ ಇಲ್ಲ; ನಾನೊಬ್ಬನೇ ಭಾಗ್ಯವಂತ' ಎಂದು ಆ ಶ್ರೀಮಂತ ತಾನೊಬ್ಬನೇ ಸುಖಭೋಗಗಳನ್ನು ಅನುಭವಿಸುತ್ತಾನೆ. ಇದು ಸಮಾಜದಲ್ಲಿ ಬಡವ-ಬಲ್ಲಿದ, ದುರ್ಬಲ-ಬಲಿಷ್ಠ ಮುಂತಾದ ಭೇದವನ್ನು ಸೃಷ್ಟಿಸುತ್ತದೆ. ಹಂಚಿ ತಿನ್ನುವ, ಎಲ್ಲರಿಗೂ ಪಾಲು ನೀಡಿ ಬದುಕುವ ಸ್ವಭಾವ ಇಲ್ಲಿ ಬತ್ತಿ ಹೋಗುತ್ತದೆ. ಇದೇ ಬಿಕ್ಕಟ್ಟಿನ ಮೂಲ. ಆದರೆ ಒಬ್ಬ ಉಳ್ಳವನನ್ನು ಕಂಡು ಕರುಬುವ ಮಂದಿ, ತಮಗಿಲ್ಲ ಎಂದು ದೂರುತ್ತಾರಲ್ಲದೆ, ಅಂತಹ ಪ್ರವೃತ್ತಿ ಕೆಟ್ಟದು ಎಂಬುದನ್ನು ಅರಿತುಕೊಳ್ಳುವುದೇ ಇಲ್ಲ. ಅನುಕೂಲ ಸಂದರ್ಭ ಬಂದಾಗ ಅವರೂ ಅದೇ ರೀತಿ ಶ್ರೀಮಂತರಾಗಬಯಸುತ್ತಾರೆ; ಉಳಿದವರಿಗೆ ಇಲ್ಲದಿದ್ದರೂ ಸರಿ, ತನಗಿದ್ದರೆ ಸಾಕು ಎಂಬ ಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ. ಹೀಗೆ ಸಮಾಜದಲ್ಲಿ ವರ್ಗಗಳು ಸೃಷ್ಟಿಯಾಗುತ್ತವೆ.

ದುಷ್ಟಪ್ರವೃತ್ತಿಯ ಜನರೇ ಧನಿಕರಾದಾಗ, ಉನ್ನತ ವರ್ಗದ ಜನರಾದಾಗ-ಪಾಪ, ಬಡವರು ಅಥವಾ ಅವಕಾಶವಂಚಿತರು ಇನ್ನೊಂದೆಡೆ ಕಷ್ಟಪಡುತ್ತಾರೆ. ಆದರೆ ಜೀವನದ ಎಲ್ಲ ವಿಷಯಗಳಲ್ಲೂ ಅವರು ಶ್ರೀಮಂತರನ್ನೇ ಅನುಕರಿಸುತ್ತಾರೆ. ಅಧಿಕಾರ, ಹಣ, ಅಂತಸ್ತುಗಳಿಗೆ ಸಮಾಜದ ಅಭಿಪ್ರಾಯ, ಆಭಿರುಚಿ ಹಾಗೂ ರೀತಿನೀತಿಗಳನ್ನು ರೂಪಿಸುತ್ತವೆ.

ಜೀವನ ನಡೆಸಲು ಅಗತ್ಯವಸ್ತುಗಳ ಪೂರೈಕೆಯಾಗಬೇಕು; ಅದಕ್ಕಾಗಿ ಹೋರಾಟ, ದುಡಿಮೆ ಅನಿವಾರ್ಯ. ಆದರೆ ಅದನ್ನೂ ಮೀರಿ ಐಷಾರಾಮಿ ಜೀವನದ, ವೈಭವೋಪೇತ ಜೀವನದ ಬಯಕೆ ಯಾಕೆ ಉಂಟಾಗಬೇಕು? ವಿಜ್ಞಾನ, ತಂತ್ರಜ್ಞಾನ, ಉದ್ದಿಮೆಗಳೆಲ್ಲ ಕೃತಕ ವೈಭವದ ವಸ್ತುಗಳನ್ನೇ 'ಅತ್ಯಗತ್ಯ'ವೆಂದು ಜನರ ಮುಂದೆ ಏಕೆ ನಂಬಿಸುತ್ತವೆ? ನಗರೀಕರಣದಿಂದಾಗಿ ಜನರು ಕಟ್ಟಿಕೊಳ್ಳುವ ಸುಖವು, ಅದಕ್ಕೆ ಸಮಾನಾಂತರವಾಗಿ ಬಡತನದ, ದುಡಿಮೆಯ, ಕೊಳಗೇರಿಗಳ ನಿರ್ಮಾಣಕ್ಕೂ, ಶ್ರೀಮಂತ-ಬಡವರ ನಡುವಿನ ಅಂತರಕ್ಕೂ ಕಾರಣವಾಗುತ್ತದೆ. ಇದರ ನಡುವೆ ವಿವೇಕ, ನೀತಿ, ಮೌಲಿಕ ಚಿಂತನೆಗಳು ದುರ್ಬಲ ಧ್ವನಿಯಾಗಿ ಇಂಗಿಹೋಗುತ್ತದೆ.

### ಭೌತಿಕ ನೆಲೆಯನ್ನು ಮೀರಿ ಹೋದವರು

ಇನ್ನೊಂದು ವರ್ಗದ ಜನರಿದ್ದಾರೆ. ಇವರು ಹೆಚ್ಚಾಗಿ ಮಧ್ಯಮ ವರ್ಗದವರು. ಜೀವನದ ಅಗತ್ಯ ವಸ್ತುಗಳೆಲ್ಲ ಅವರಿಗೆ ಪೂರೈಕೆಯಾಗಿವೆ. ತಕ್ಕ ಮಟ್ಟಿಗೆ ಸುಖ, ಸಂತೋಷ, ನೆಮ್ಮದಿಗಳನ್ನು ಹೊಂದಿದ್ದಾರೆ. ಅತಿಯಾಗಿ ಕೂಡಿಹಾಕುವ, ಸಂಪತ್ತನ್ನು ಗಳಿಸುವ ಪ್ರವೃತ್ತಿ ಇವರದಲ್ಲ. ತಮ್ಮ ಶಕ್ತಿಸಾಮರ್ಥ್ಯ, ಬುದ್ಧಿವಂತಿಕೆಯಿಂದ ತಮ್ಮ ಜೀವನವನ್ನು ಚೆನ್ನಾಗಿ ಮಾಡಿಕೊಳ್ಳುವುದು ಅವರಿಗೆ ಸಾಧ್ಯ. ಆದರೆ ಅವರ ಪ್ರವೃತ್ತಿ ಇನ್ನೊಂದಡೆಗೆ-ಮಾನಸಿಕ, ಬೌದ್ಧಿಕ ಬೆಳವಣಿಗೆಯಿಂದಾಗಿ ಅವರು ಭೌತಿಕ ನೆಲೆಯನ್ನು ಮೀರಿ ಚಿಂತಿಸುತ್ತಾರೆ. ಗ್ರೀಕ್, ರೋಮನ್ ಸಾಮ್ರಾಜ್ಯಗಳಲ್ಲಿ ಉತ್ತಮ ತತ್ತ್ವಶಾಸ್ತ್ರಜ್ಞರು, ಚಿಂತಕರು ಇದ್ದರು. ಮಧ್ಯಕಾಲೀನ ಅವಾಂತರಗಳ ಬಳಿಕ, ಪುನರುತ್ಥಾನದ ಯುಗ ಯೂರೋಪಿನಲ್ಲಿ ಆರಂಭವಾಯಿತು. ಆಧುನಿಕ ವಿಜ್ಞಾನಕ್ಕೆ ನಾಂದಿ ಹಾಡಿದ್ದೇ ವಿಚಾರವಂತರ, ಚಿಂತಕರ ಹಾಗೂ ಸ್ವತಂತ್ರ ಪ್ರವೃತ್ತಿಯ ಜನರ ಚಳುವಳಿಯಿಂದಾಗಿ. ಆಧುನಿಕ ವಿಜ್ಞಾನದ ಅನ್ವೇಷಣೆಗಳು ಹಿಂದೆಂದೂ ಕಾಣದ ಅದ್ಭುತಗಳನ್ನು ಜಗತ್ತಿಗೆ ತೋರಿಸಿಕೊಟ್ಟವು. ಇಡೀ ಪ್ರಪಂಚವೇ ಬದಲಾಯಿತು. ಹೊಸ ಹೊಸ ಆವಿಷ್ಕಾರಗಳಾದವು; ಯಂತ್ರಗಳ ನಿರ್ಮಾಣ, ವೈದ್ಯಕೀಯ ಅನ್ವೇಷಣೆ, ಸಂಪರ್ಕವಾಹನಗಳ ನಿರ್ಮಾಣ, ವಿದ್ಯುಚ್ಛಕ್ತಿ – ಹೀಗೆ ಮಾನವನ ಬದುಕು ಎಣಿಕೆಗೂ ಮೀರಿ ಬದಲಾಯಿತು. ಆದರೆ ಇದರಿಂದ ಮಾನವನ ಲೋಭಪ್ರವೃತ್ತಿ, ಕೂಡಿ ಹಾಕುವ ಸ್ವಭಾವ, ಪೈಪೋಟಿ ಇಲ್ಲದಾಯಿತೆ? – ಇಲ್ಲವೆಂದೇ ಹೇಳಬಹುದು.

ಆದರೆ ಪಶ್ಚಿಮದಲ್ಲಿ ನಡೆದ ಈ ಬೆಳವಣಿಗೆಗೂ ಸಹಸ್ರಾರು ವರ್ಷಗಳ ಮುನ್ನ ಭಾರತದಲ್ಲಿ ಅದೆಂತಹ ಬದಲಾವಣೆ ಉಂಟಾಯಿತು! ಪಶ್ಚಿಮದಲ್ಲಾದ ಅನ್ವೇಷಣೆಗೆ ಸಂಪೂರ್ಣ ವಿರುದ್ಧವಾದ ರೀತಿಯಲ್ಲಿ , ಆದರೆ ಅದ್ಭುತವೆನ್ನುವಂತೆ. ವೇದ-ಉಪನಿಷತ್ತುಗಳ ಕಾಲದಲ್ಲೇ ಮಾನವ ಚಿಂತನ-ಮಂಥನ ನಡೆಸುತ್ತಿದ್ದ; ಭೌತಿಕ ಪ್ರಪಂಚದ ನಶ್ವರತೆಯನ್ನು ಅರಿತಿದ್ದ. ಹೀಗಾಗಿ ಇಲ್ಲಿ ಅನ್ವೇಷಣೆಯ ಜೊತೆಜೊತೆಗೇ ಆಧ್ಯಾತ್ಮಿಕತೆ, ನೈತಿಕತೆಗೆ ಒತ್ತು ನೀಡಲಾಯಿತು. ಸುಮಾರಾಗಿ ಆ ಕಾಲಕ್ಕೇ ಗಣಿತ, ಆಯುರ್ವೇದ, ಜ್ಯೋತಿಷ, ಖಗೋಳಶಾಸ್ತ್ರ ಇವೆಲ್ಲ ಒಂದೆಡೆ ಸಂಪೂರ್ಣವಾಗಿ ಬೆಳೆದ ಶಾಸ್ತ್ರಪರಂಪರೆಗಳಾಗಿದ್ದವು. ಆದರೆ ಎಲ್ಲ ಬಗೆಯ 'ವಿಜ್ಞಾನ'ಗಳಿಗೂ ಧರ್ಮ-ಅಧ್ಯಾತ್ಮ ಇವು ಕೇಂದ್ರಬಿಂದು ಎನಿಸಿಕೊಂಡವು. ಧರ್ಮ, ಪರಂಪರೆ, ನೀತಿ ಇವನ್ನು ಒಪ್ಪದ ಶಾಸ್ತ್ರವನ್ನು ತಿರಸ್ಕರಿಸಲಾಯಿತು. ಇದರ ಪರಿಣಾಮವಾಗಿ ಜನಸಾಮಾ

ನ್ಯರ ಹಂತದವರೆಗೂ ದುರಾಸೆ, ಸ್ವಾರ್ಥ, ವಂಚನೆ ಇವು ಅನೈತಿಕವೆಂದು ಪರಿಗಣಿಸುವಂತಾಯಿತು. ಆದ್ದರಿಂದ ಭಾರತೀಯ ದೃಷ್ಟಿಕೋನ ಭೌತಿಕ ಪ್ರಪಂಚದ ಕಡೆಗೆ ಹರಿಯಲಿಲ್ಲ; ಇದನ್ನು ಮೀರಿದ ಆಂತರಿಕ-ಅಲೌಕಿಕ ಪ್ರಪಂಚದೆಡೆಗೆ ಹರಿಯಿತು. ಸಾಮಾಜಿಕ, ರಾಜಕೀಯ ಜೀವನದಲ್ಲಿ ಧರ್ಮ-ನೀತಿಗಳು ಅನಿವಾರ್ಯವೆಂಬಂತಾಯಿತು. ಚಾತುರ್ವರ್ಣ್ಯ ಪದ್ಧತಿ, ಆಶ್ರಮ ಪದ್ಧತಿಗಳಿಂದ ಜನಜೀವನದಲ್ಲಿ ಹಂತಹಂತವಾದ ಬೆಳವಣಿಗೆ ಅವಕಾಶ ದೊರೆಯುವಂತಾಯಿತು. ಇದರೊಂದಿಗೆ ಕಾಲಕಾಲಕ್ಕೆ ಜನರ ಬದುಕನ್ನು ಪ್ರಭಾವಿಸಿದ ಸಾಧು-ಸಂತರು ಹಾಗೂ ಧಾರ್ಮಿಕ ನೇತಾರರು ಜನಸಾಮಾನ್ಯರ ಬದುಕಿಗೆ ಬೆಳಕಾಗಿ ಬಂದರು. ಈ ಕಾರಣಗಳಿಂದ ಭಾರತದ ಸಾಂಸ್ಕೃತಿಕ ಜನಜೀವನ ಸುಭದ್ರವಾದ ನೆಲೆಗಟ್ಟಿನ ಮೇಲೆ ಬೆಳೆದು ನಿಂತಿತು. ಪರಕೀಯ ಆಕ್ರಮಣಗಳಿಂದ ಶತಶತಮಾನಗಳ ಕಾಲ ತತ್ತರಿಸಿದರೂ, ಈ ದೇಶದ ಭದ್ರಬುನಾದಿಗೆ ಹಾನಿಯುಂಟಾಗಲಿಲ್ಲ. ತೀರ ಇತ್ತೀಚೆಗೆ ಮತ್ತೆ ಎಲೆಕ್ಟ್ರಾನಿಕ್ ಮಾಧ್ಯಮಗಳ, ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಪಶ್ಚಿಮದ ಜೀವನ ಶೈಲಿ ನಗರಜೀವನವನ್ನು ಕಬಳಿಸುವಂತೆ ಕಾಣಿಸುತ್ತಿದೆ; ಆದರೆ ಇದು ತಾತ್ಕಾಲಿಕ ಪ್ರಭಾವ ಮಾತ್ರ. ಭಾರತದ ಜೀವನಾಡಿ ಎಂದಿಗೂ ಬತ್ತಿಹೋಗದಷ್ಟು ಭದ್ರವಾಗಿದೆ.

### ಪ್ರಸ್ತುತ ಸನ್ನಿವೇಶದಲ್ಲಿ ಮುನ್ನೋಟ

ಇಂದಿನ ಪರಿಸ್ಥಿತಿಯನ್ನು ಗಮನಿಸಿದಾಗ ನಮ್ಮ ದೃಷ್ಟಿಕೋನ, ನಿರೀಕ್ಷೆ ಹಾಗೂ ನಮ್ಮ ಕರ್ತವ್ಯ ಎಂತಹುದಿರಬೇಕು ಎಂಬುದರ ಬಗ್ಗೆ ನಾವು ಚಿಂತನೆ ನಡೆಸಬೇಕಾಗಿದೆ. ಇಲ್ಲಿ ನಮ್ಮ ಜೀವನಕ್ಕೆ ಅತ್ಯಗತ್ಯವಾಗಿ ಇರಬೇಕಾದ ವಸ್ತುಗಳು ಹಾಗೂ ಸೌಲಭ್ಯಗಳೇನು ಎಂದು ಹೀಗೆ ಪಟ್ಟಿ ಮಾಡಬಹುದು.

೧) ಪ್ರಾಥಮಿಕ ಆವಶ್ಯಕತೆ: ಆಹಾರ, ಬಟ್ಟೆಬರೆ, ವಸತಿ, ವೈದ್ಯಕೀಯ ಸೌಲಭ್ಯ, ವಾಹನ ಇತ್ಯಾದಿ.

೨) ಶಿಕ್ಷಣ ಮತ್ತು ವಿದ್ಯಾಭ್ಯಾಸ.

೩) ಆಡಳಿತ, ನ್ಯಾಯ ಹಾಗೂ ರಕ್ಷಣ ವ್ಯವಸ್ಥೆ.

೪) ಸಂಸ್ಕೃತಿ, ಕಲೆ, ಧರ್ಮ-ಅಧ್ಯಾತ್ಮ ಇವುಗಳ ಬೆಳವಣಿಗೆ.

ಕೆಲವೇ ಮಂದಿಗೆ ಇವು ಸಾಕು; ಉಳಿದವರಿಗೆ ಬೇಕಿಲ್ಲ ಎಂಬ ಭಾವನೆಯಿಂದ ಅನ್ಯಾಯ, ಸಾಮಾಜಿಕ ಅಶಾಂತಿ ಸೃಷ್ಟಿಯಾಗುವುದು. ಆದ್ದರಿಂದ ಈ ಆವಶ್ಯಕತೆಗಳು ಸಾರ್ವಜನಿಕವಾಗಿ ಲಭ್ಯವಿರಬೇಕು. ಜಾತಿ-ಮತ-ಪಂಥಗಳ ಗೊಂದಲ ಸೃಷ್ಟಿಯಾಗದಂತೆ, ಇವುಗಳನ್ನು ದುರುಪಯೋಗ ಮಾಡಿಕೊಳ್ಳದಂತೆ ಸ್ಪಷ್ಟವಾದ ಕಟ್ಟುಪಾಡುಗಳಿರಬೇಕು. ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ನೈತಿಕ, ಧಾರ್ಮಿಕ ಹಾಗೂ ಬೌದ್ಧಿಕ ತರಬೇತಿ ಅತ್ಯಂತ ಸಮರ್ಪಕವಾಗಿಯೂ ಪ್ರಾಯೋಗಿಕವಾಗಿಯೂ ನಡೆಯಬೇಕು. ಸಹಬಾಳ್ವೆ, ಶಾಂತಿ, ಸಹಕಾರಗಳು ಮಾತ್ರವೇ ಬದುಕಿನ ನಿಜವಾದ ಸೂತ್ರವಾಗಬೇಕು. ಎಲ್ಲಕ್ಕಿಂತಲೂ ಅಧಿಕವಾಗಿ ಶಿಸ್ತುಬದ್ಧತೆ, ದೇಶಭಕ್ತಿ, ಕರ್ತವ್ಯನಿಷ್ಠೆ ಹಾಗೂ ಪ್ರಾಮಾಣಿಕತೆ-ಇವುಗಳನ್ನು ರೂಢಿಸಿಕೊಳ್ಳುವಲ್ಲಿ ತರಬೇತಿ ನೀಡಬೇಕು.

ಈ ಕಾರ್ಯ ಸಾಧಿಸಲು ಯೋಗ್ಯ ಶಿಕ್ಷಕರ ತರಬೇತಿ ಅತ್ಯಗತ್ಯ. ಯೋಗ್ಯ ಶಿಕ್ಷಕರ ತಯಾರಿ ಅಷ್ಟು ಸುಲಭದ ಮಾತೆ? ಕೇವಲ ಸರ್ಕಾರ ಮಾತ್ರವಲ್ಲ, ಅತ್ಯುತ್ತಮ ಚಿಂತಕರ, ತತ್ತ್ವಜ್ಞಾನಿಗಳ ಹಾಗೂ ಅನುಭವ ಹೊಂದಿದ ವಿದ್ವಾಂಸರ ಪರಿಶ್ರಮವೂ ಮುಖ್ಯವಾಗುವುದು.

ಪುಸ್ತಕ ಓದುವ, ಅಧ್ಯಯನ ನಡೆಸುವ, ಚಿಂತನ-ಮಂಥನ ನಡೆಸುವ ಸಾಮರ್ಥ್ಯ ಎಲ್ಲ ಬೆಳೆಯುವ ವಿದ್ಯಾರ್ಥಿಗಳಿಗೂ ಅತ್ಯಗತ್ಯ. ಯಾವಾಗಲೂ ಟಿ.ವಿ. ನೋಡುತ್ತ ಮರುಳಾಗುವ, ಮೊಬೈಲ್‌ನಿಂದ ಕಣ್ಣು ಕೀಳದ ಎಳೆಯ ಮನಸ್ಸುಗಳಿಗೆ ಓದುವ ಹವ್ಯಾಸ ಹೇಗೆ ಬೆಳೆಯುವುದು? ಈ ಬಗ್ಗೆ ವಿದ್ಯಾಸಂಸ್ಥೆಗಳು, ಅಧ್ಯಾಪಕರು ಹಾಗೂ ಪಾಲಕರು ವಿಶೇಷ ಗಮನ ಕೊಡಬೇಕು. ಯಂತ್ರ ಮಾಧ್ಯಮಗಳ ಸರಿಯಾದ ಬಳಕೆಯಾದರೆ ಮಾತ್ರ ಅವು ಸಹಾಯಕವಾಗುವುವು; ಇಲ್ಲದಿದ್ದರೆ ಅವೇ ಬೆಳೆಯುವ ಮನಸ್ಸುಗಳಿಗೆ ಮಾರಕವಾಗಬಲ್ಲವು.

ಬದುಕಿನ ಒಟ್ಟುನೋಟ ಎಲ್ಲರಿಗೂ ಬರುವುದಿಲ್ಲ, ನಿಜ. ಆದರೆ ಒಂದಲ್ಲ ಒಂದು ಹಂತದಲ್ಲಿ ಅದನ್ನು ಎಲ್ಲರೂ ಕಾಣುವಂತಾಗಬೇಕು. ಮನುಷ್ಯರಾದ ನಾವು ಹೇಗೆ ಬದುಕಬೇಕು? ಏಕೆ ಬದುಕಬೇಕು? ಯಾವ ರೀತಿ ಬದುಕಿದರೆ ನಮ್ಮ ಜೀವನ ವ್ಯರ್ಥವಾಗದು, ಹಾಗೂ ಎಂತಹ ಬಾಳಿನಿಂದ ನಾವು ಅದ್ಭುತ ಸತ್ಯಗಳನ್ನು ಕಾಣಬಹುದು- ಇವೇ ಮೊದಲಾದ ಪ್ರಶ್ನೆಗಳನ್ನು ನಾವು ಆಗಾಗ ಹಾಕಿಕೊಳ್ಳಬೇಕು. ಓದು, ಬರಹ, ಚಿಂತನೆ- ಇವು ಕೆಲವರು ಅಶಕ್ತರಿಗೆ ಮಾತ್ರ ಬೇಕಾದ ಹವ್ಯಾಸಗಳಲ್ಲ; ಅವು ಎಲ್ಲರೂ ಬೆಳೆಸಿಕೊಳ್ಳಲೇಬೇಕಾದ ಅನಿವಾರ್ಯ ಅಭ್ಯಾಸ ಕ್ರಮವಾಗಬೇಕು. ಪ್ರತಿಯೊಬ್ಬ ಭಾರತೀಯನೂ ಸ್ವತಂತ್ರವಾಗಿ ಚಿಂತಿಸಿ, ತನಗೆ ತಾನೇ ಅದಕ್ಕೆ ಉತ್ತರವನ್ನು ಕಂಡುಕೊಳ್ಳುವ ದಿನ ಅದೆಂದು ಬರುವುದೋ! ✽

### ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಗುರುವಾರ | ಸ್ವಾಮಿ ಪ್ರೇಮಾನಂದ ಜಯಂತಿ |
| ೪ | ಭಾನುವಾರ | ಏಕಾದಶಿ |
| ೧೫ | ಗುರುವಾರ | ಶ್ರೀಶಾರದಾದೇವಿ ಜಯಂತಿ |
| ೧೯ | ಸೋಮವಾರ | ಏಕಾದಶಿ |
| | | ಸ್ವಾಮಿ ಶಿವಾನಂದ ಜಯಂತಿ |
| ೨೪ | ಶನಿವಾರ | ಕ್ರಿಸ್‌ಮಸ್ ಈವ್ |
| ೨೮ | ಬುಧವಾರ | ಸ್ವಾಮಿ ಶಾರದಾನಂದ ಜಯಂತಿ |